**National**
**Kannada**
**14.05.2025 / 19.35**
ಆಕಾಶವಾಣಿ, ಬೆಂಗಳೂರು
**ರಾಷ್ಟ್ರೀಯ ವಾರ್ತೆಗಳು**

<u>ಮುಖ್ಯಾಂಶಗಳು</u>

೧. ಉತ್ತರ ಪ್ರದೇಶದಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರ ಅನುಮೋದನೆ

೨. ಜಾಗತಿಕವಾಗಿ ೫ಜಿ ವೇಗವಾಗಿ ಅಳವಡಿಸಿದ ರಾಷ್ಟ್ರಗಳಲ್ಲಿ ಭಾರತ ಮುಂಚೂಣಿಯಲ್ಲಿ - ಕೇಂದ್ರ ಸಚಿವ ಡಾ. ಚಂದ್ರಶೇಖರ್ ಪೆಮ್ಮಸಾನಿ

೩. ನವದೆಹಲಿಯಲ್ಲಿಂದು ಚುನಾವಣಾ ಅಧಿಕಾರಿಗಳ ೨ ದಿನಗಳ ಸಾಮರ್ಥ್ಯ ವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಚಾಲನೆ

೪. ಛತೀಸ್‌ಗಡದಲ್ಲಿ ನಡೆದ ಭದ್ರತಾ ಕಾರ್ಯಚರಣೆಯಲ್ಲಿ ೩೧ ಮಾವೋವಾದಿಗಳು ಹತ

೫. ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್; ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಭಾರತದ ಆಕರ್ಷಿ ಕಶ್ಯಪ್ , ಉನ್ನತಿ ಹೂಡಾ

**<><*<><>*><>**

ಉತ್ತರ ಪ್ರದೇಶದ ಜೇವರ್ ವಿಮಾನ ನಿಲ್ದಾಣದ ಬಳಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಸೆಮಿ ಕಂಡಕ್ಟರ್ ಘಟಕಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾಹಿತಿ ಹಂಚಿಕೊಂಡ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಹೆಚ್‌ಸಿಎಲ್ ಮತ್ತು ಫಾಕ್ಸ್‌ಕಾನ್ ಸಹಯೋಗದೊಂದಿಗೆ ಇಂಡಿಯಾ ಸೆಮಿ ಕಂಡಕ್ಟರ್ ಯೋಜನೆಯಡಿಯಲ್ಲಿ ಈ ಘಟಕವನ್ನು ಸ್ಥಾಪಿಸಲಾಗುತ್ತಿದೆ ಎಂದರು.

ಈ ಘಟಕ ೩ ಸಾವಿರದ ೭೦೦ ಕೋಟಿ ರೂಪಾಯಿ ಹೂಡಿಕೆ ಆಕರ್ಷಿಸಲಿದೆ. ೫ ಸೆಮಿಕಂಡಕ್ಟ್ ಘಟಕಗಳು ಈಗಾಗಲೇ ನಿರ್ಮಾಣ ಹಂತದಲ್ಲಿದೆ. ಈ ೬ನೇ ಘಟಕದೊಂದಿಗೆ ಭಾರತ ಸೆಮಿಕಂಡಕ್ಟ್‌ರ್ ಉದ್ಯಮ ಅಭಿವೃದ್ಧಿಯಡೆಗಿನ ತನ್ನ ಪಯಣದಲ್ಲಿ ದಾಪುಗಾಲಿಡುತ್ತಿದೆ. ದೇಶದ ೨೭೦ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳು ಹಾಗು ೭೦ ನವೋದ್ಯಮಗಳು ನೂತನ ಉತ್ಪನ್ನಗಳ ಅಭಿವೃದ್ಧಿಗೆ ವಿಶ್ವಮಟ್ಟದ ನೂತನ ವಿನ್ಯಾಸ ತಂತ್ರಜ್ಞಾನದ ಮೇಲೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

<><*<><>*><>

ಜಾಗತಿಕವಾಗಿ ಭಾರತ ೫-ಜಿ ಅನ್ನು ವೇಘವಾಗಿ ಅಳವಡಿಸಿದ ರಾಷ್ಟ್ರಗಳಲ್ಲಿ ಒಂದಾಗಿದ್ದು, ಕಳೆದ ೨ ವರ್ಷಗಳಲ್ಲಿ ೪ ಲಕ್ಷದ ೭೦ ಸಾವಿರಕ್ಕೂ ಅಧಿಕ ಬೇಸ್ ಟ್ರಾನ್ಸಿವರ್ ಸ್ಟೇಷನ್‌ಗಳನ್ನು ದೇಶಾದ್ಯಂತ ನಿಯೋಜಿಸಲಾಗಿದೆ ಎಂದು ಕೇಂದ್ರ ಸಂವಾಹ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ರಾಜ್ಯ ಸಚಿವ ಡಾ.ಚಂದ್ರಶೇಖರ್ ಪೆಮ್ಮಸಾನಿ, ಹೇಳಿದ್ದಾರೆ.

ನವದೆಹಲಿಯಲ್ಲಿಂದು ನಡೆದ ಭಾರತ್ ೬ಜಿ ೨೦೨೫ ೩ನೇ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ೫-ಜಿ ಕ್ರಾಂತಿಗೆ ಸಾಕ್ಷಿಯಾಗಿದೆ. ಭಾರತ ದೇಶದ ಶೇಕಡ ೮೦ರಷ್ಟು ಜನರಿಗೆ ೫-ಜಿ ವ್ಯಾಪ್ತಿಯನ್ನು ವಿಸ್ತರಿಸಿದೆ. ದೇಶೀಯ ೪-ಜಿ ಮತ್ತು ೫-ಜಿ ಉಪರಕರಣಗಳ ಉತ್ಪಾದನ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲಾಗಿದ್ದು, ಎಲ್ಲಾ ನಾಗರಿಕರಿಗೆ ಗುಣಮಟ್ಟ ಸೇವೆ ಹಾಗೂ ಡಿಜಿಟಲ್ ಪ್ರವೇಶವನ್ನ ಕಾಯ್ದುಕೊಳ್ಳುವ ಜೊತೆಗೆ ಜಾಗತಿಕವಾಗಿ ಅತೀ ಕಡಿಮೆ ೫-ಜಿ ಡೇಟಾ ದರವನ್ನು ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದರು.

<><*<><>*><>

ಮನೆ ಮನೆ ಪರಿಶೀಲನೆಗೆ ಅನುಕೂಲವಾಗಿಸುವ ನಿಟ್ಟಿನಲ್ಲಿ ಬೂತ್ ಮಟ್ಟದ ಅಧಿಕಾರಿಗಳಿಗೆ ಗುರುತಿನ ಚೀಟಿ ನೀಡಲಾಗುವುದು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಿಳಿಸಿದ್ದಾರೆ.

ನವದೆಹಲಿಯಲ್ಲಿಂದು ಹರಿಯಾಣ ದೆಹಲಿ ಮತ್ತು ಬಿಹಾರದ ಬೂತ್ ಮಟ್ಟದ ಅಧಿಕಾರಿಗಳು, ಮೇಲ್ವಿಚಾರಕರು ಮತ್ತು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ೨ ದಿನಗಳ ಸಾಮರ್ಥ್ಯವೃದ್ಧಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವ ಅಧಿಕಾರಿಗಳು ತಮ್ಮ ತಮ್ಮ ರಾಜ್ಯಗಳ ಇತರ ಬೂತ್ ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡಲಿದ್ದಾರೆ ಎಂದು ತಿಳಿಸಿದರು.

ಒಟ್ಟು ೩೭೧ ತಳಮಟ್ಟದ ಚುನಾವಣಾ ಅಧಿಕಾರಿಗಳು ಈ ತರಬೇತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಮತದಾರರ ನೊಂದಣಿ, ಅರ್ಜಿ ನಿರ್ವಹಣೆ ಮತ್ತು ಕ್ಷೇತ್ರಮಟ್ಟದ ಚುನಾವಣಾ ವಿಧಾನಗಳ ಅನುಷ್ಠಾನದ ಹಂತಗಳ ಕುರಿತಂತೆ ಪ್ರಾಯೋಗಿಕ ಜ್ಞಾನ ಹೆಚ್ಚಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿದರು.

<><*<><>*><>

ಅರುಣಾಚಲ ಪ್ರದೇಶದೊಳಗಿನ ಕೆಲವು ಸ್ಥಳಗಳನ್ನು ಮರುನಾಮಕರಣ ಮಾಡುವ ಚೀನಾದ ಆಧಾರ ರಹಿತ ಪ್ರಯತ್ನಗಳನ್ನು ಭಾರತ ಸ್ಪಷ್ಟವಾಗಿ ತಿರಸ್ಕರಿಸಿದೆ.

ಈ ಕುರಿತಂತೆ ಮಾಧ್ಯಮಗಳಿ ಮಾಹಿತಿ ನೀಡಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಈ ರೀತಿಯ ಕ್ರಮಗಳು ಸಂಪೂರ್ಣ ತಿರಸ್ಕಾರಾರ್ಹವಾಗಿದ್ದು, ಭಾರತದ ಸ್ಥಿರ ಹಾಗೂ ತಾತ್ವಿಕ ನಿಲುವಿಗೆ ವಿರುದ್ಧವಾಗಿವೆ. ಎಷ್ಟೇ ಸೃಜನಾತ್ಮಕವಾಗಿ ಹೆಸರುಗಳನ್ನು ಬದಲಾಯಿಸಿದರು, ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗವಾಗಿರುತ್ತದೆ ಎಂಬ ಸತ್ಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ ಎಂದು ಹೇಳಿದರು.

<><*><><>*><>

ಛತ್ತೀಸ್‌ಗಡದ ಬಿಜಾಪುರ ಜಿಲ್ಲೆಯ ಕರೇಗುಟ್ಟ ಬೆಟ್ಟದಲ್ಲಿ ನಡೆಸಲಾದ ಮಾವೋವಾದಿ ವಿರೋಧಿ ಕಾರ್ಯಾಚರಣೆಯಲ್ಲಿ ೧೬ ಮಹಿಳೆಯರು ಸೇರಿದಂತೆ ೩೧ ಮಾವೋವಾದಿಗಳು ಹತರಾಗಿದ್ದಾರೆ.

ಈ ಕುರಿತಂತೆ ಬಿಜಾಪುರದಲ್ಲಿಂದು ನಡೆದ ಸುದ್ದಿಗೋಷ್ಠಿಯಲ್ಲಿ ಸಿಆರ್‌ಪಿಎಫ್ ಮಹಾನಿರ್ದೇಶಕ ಜ್ಞಾನೇಂದ್ರ ಪ್ರತಾಪ್ ಸಿಂಗ್, ಛತ್ತೀಸ್‌ಗಡ ಪೊಲೀಸ್ ಮಹಾನಿರ್ದೇಶಕ ಅರುಣ್ ದೇವ್ ಗೌತಮ್ ಮತ್ತು ಬಿಜಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ಯಾದವ್, ಮಾಹಿತಿ ನೀಡಿದರು.

ಏಪ್ರಿಲ್ ೨೧ ರಿಂದ ಈ ತಿಂಗಳ ೧೧ರವರೆಗೆ ಸುಮಾರು ೨೧ ದಿನಗಳ ಕಾಲ ನಡೆದ ಕಾರ್ಯಾಚರಣೆಯಲ್ಲಿ ಹತರಾದ ೩೧ ಮಾವೋವಾದಿಗಳಲ್ಲಿ ೨೮ ಮಂದಿಯ ಗುರುತು ಪತ್ತೆಯಾಗಿದೆ. ಇವರ ಕುರಿತು ಮಾಹಿತಿ ನೀಡಿದವರಿಗೆ ಒಟ್ಟು ೧.೭೨ ಕೋಟಿ ರೂಪಾಯಿ ಪುರಸ್ಕಾರ ಘೋಷಿಸಲಾಗಿತ್ತು.

೨೦೨೬ರ ಮಾರ್ಚ್‌ರೊಳಗೆ ದೇಶವನ್ನು ನಕ್ಸಲ್ ಮುಕ್ತಗೊಳಿಸುವ ಕೇಂದ್ರ ಸರ್ಕಾರದ ಸಂಕಲ್ಪವನ್ನು ಸಾಧಿಸುವ ಉದ್ದೇಶದಿಂದ ಈ ಕಾರ್ಯಚರಣೆಗಳನ್ನು ನಡೆಸಲಾಗುತ್ತಿದೆ ಎಂದು ಸಿಆರ್‌ಪಿಎಫ್ ಮಹಾನಿರ್ದೇಶಕ ಜ್ಞಾನೇಂದ್ರ ಪ್ರತಾಪ್ ಸಿಂಗ್ ತಿಳಿಸಿದರು.

<><*><><>*><>

ದೇಶದಲ್ಲಿ ಸುಳ್ಳು ಸುದ್ದಿ ಹರಡಿದ ಆರೋಪದ ಮೇಲೆ ಸಾಮಾಜಿಕ ಮಾಧ್ಯಮ ಎಕ್ಸ್‌ನ ಗ್ಲೋಬಲ್ ಟೈಮ್, ಷಿನ್ಹುವಾ ಸುದ್ದಿವಾಹಿನಿ ಮತ್ತು ಟಿಆರ್‌ಟಿ ವಲಗೆ ಸೇರಿದ್ದ ಖಾತೆಗಳ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ.

ಗ್ಲೋಬಲ್ ಟೈಮ್ ಅನ್ನುವುದು ಚೀನಾದ ಕಮುನಿಸ್ಟ್ ಪಕ್ಷದ ಮಾಲೀಕತ್ವದ ಪೀಪಲ್ಸ್ ಡೈಲಿಯಡಿಯಲ್ಲಿ ಕಾರ್ಯನಿರ್ವಹಿಸುವ ಆಂಗ್ಲ ಟ್ಯಾಬ್ಲಾಯ್ಡ್ ಪತ್ರಿಕೆಯಾಗಿದೆ. ಷಿನ್ಹುವಾ ಸುದ್ದಿವಾಹಿನಿ

ಚೀನಾದ ಅಧಿಕೃತ ರಾಜ್ಯ ಸುದ್ದಿ ಸಂಸ್ಥೆಯಾಗಿದೆ. ಹಾಗೂ ಟಿಆರ್‌ಟಿ ವಲ ಟರ್ಕಿಯ ಸಾರ್ವಜನಿಕ ಪ್ರಸಾರ ಸಂಸ್ಥೆಯಾಗಿದೆ.

<><*<><>*><>

ಪಶ್ಚಿಮ ಗಡಿ ಭದ್ರತೆಯ ಪರಿಶೀಲನೆ ನಂತರ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗುಜರಾತ್‌ನಲ್ಲಿರುವ ಭಾರತೀಯ ವಾಯುಪಡೆಯ ಭುಜ್ ವಾಯುನೆಲೆಗೆ ಇದೇ ೧೬ ರಿಂದ ೨ ದಿನಗಳ ಕಾಲ ಭೇಟಿ ನೀಡಲಿದ್ದಾರೆ. ಈ ವಾಯು ನೆಲೆ, ಪಾಕಿಸ್ತಾನ ನಡೆಸಿದ ಡ್ರೋನ್ ದಾಳಿಯನ್ನು ಸಮರ್ಥವಾಗಿ ಎದುರಿಸಿ ವಿಫಲಗೊಳಿಸಿತ್ತು.

<><*<><>*><>

ಉತ್ತರಾಖಂಡದಲ್ಲಿ ಇಂದಿನಿಂದ ಆದಿ ಕೈಲಾಸ ಮತ್ತು ಓಂ ಪರ್ವತ ಯಾತ್ರೆ ಆರಂಭಗೊಳ್ಳಲಿದೆ. ಇಂದು ನೈನಿತಾಲ್ ಜಿಲ್ಲೆಯ ಕಾಠ್ಗೋದಾಮ್‌ನಿಂದ ಈ ಯಾತ್ರೆ ಆರಂಭವಾಗಲಿದೆ. ಕುಮಾವೋನ್ ಮಂಡಲ್ ವಿಕಾಸ ನಿಗಮವು ಯಾತ್ರಿಕರ ಅನುಕೂಲ ಮತ್ತು ಸುರಕ್ಷತೆಗಾಗಿ ವ್ಯಾಪಕವಾದ ವ್ಯವಸ್ಥೆಗಳನ್ನು ಕೈಗೊಂಡಿದೆ.

೧೯ ಸದಸ್ಯರ ಮೊದಲ ಗುಂಪು ಕಾಠ್ಗೋದಾಮ್‌ನಿಂದ ಯಾತ್ರೆ ಕೈಗೊಳ್ಳಲಿದೆ. ಈ ಗುಂಪಿನಲ್ಲಿ ಉತ್ತರಾಖಂಡದ ೭ ಯಾತ್ರಿಕರು ಮತ್ತು ಮಹಾರಾಷ್ಟ್ರ ಮತ್ತು ತಮಿಳುನಾಡಿನಿಂದ ತಲಾ ೬ ಯಾತ್ರಿಕರು ಸೇರಿದ್ದಾರೆ.

<><*<><>*><>

ಸೌದಿ ಅರೇಬಿಯಾದ ರಾಜಧಾನಿ ರಿಯಾಧ್‌ನಲ್ಲಿ ಇಂದು ನಡೆದ ಅಮೆರಿಕಾ ಹಾಗು ಗಲ್ಫ್ ಸಹಕಾರ ಮಂಡಲಿ ಜಿಸಿಸಿ ಸದಸ್ಯರ ಶೃಂಗಸಭೆಯ ನೇಪಥ್ಯದಲ್ಲಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿರಿಯಾ ಮಧ್ಯಂತರ ಅಧ್ಯಕ್ಷ ಅಹ್ಮದ್ ಅಲ್ ಶರಾ ಅವರನ್ನು ಭೇಟಿಯಾದರು.

ಈ ವೇಳೆ, ಅಧ್ಯಕ್ಷ ಟ್ರಂಪ್, ಪಶ್ಚಿಮ ಏಷ್ಯಾ ರಾಷ್ಟ್ರಗಳು ಇಸ್ರೇಲ್ ಜೊತೆಗಿನ ಸಂಬಂಧವನ್ನು ಸುಧಾರಿಸಲು ಅಮೆರಿಕಾ ನೇತೃತ್ವದ ಉಪಕ್ರಮವಾದ ಅಬ್ರಹಂ ಒಪ್ಪಂದಗಳಿಗೆ ಸೇರಿಕೊಳ್ಳಲು ಆಗ್ರಹಿಸಿದರು.

<><*<><>*><>

ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ್ ಷಟ್ಲರ್‌ಗಳಾದ ಆಕರ್ಷಿ ಕಶ್ಯಪ್ ಮತ್ತು ಉನ್ನತಿ ಹೂಡಾ ಪ್ರಿ ಕ್ವಾಟ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಮಹಿಳಾ ಸಿಂಗಲ್ಸ್‌ನ ೩೨ನೆ ಸುತ್ತಿನಲ್ಲಿ ಆಕರ್ಷಿ ಹೂಡಾ ಜಪಾನ್‌ನ ಕಾವೊರು ಸುಗಿಯಾಮಾ ಅವರನ್ನು ೨೧-೧೬, ೨೦-೨೨, ೨೨-೨೦ ಸೆಟ್‌ಗಳ ಅಂತರದಲ್ಲಿ ಮಣಿಸಿ ಮುಂದಿನ ಹಂತ ಪ್ರವೇಶಿಸಿತು.

<><*<><>*><>

ಖೇಲೋ ಇಂಡಿಯಾ ಯುವ ಕ್ರೀಡಾಕೂಟ ಅಂತಿಮ ಹಂತ ತಲುಪುತ್ತಿದ್ದು, ನವದೆಹಲಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಜಿಮ್‌ನ್ಯಾಸ್ಟಿಕ್ ಸ್ಪರ್ಧೆಯಲ್ಲಿ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿದ್ದಾರೆ.

ಇಂದು ನಡೆದ ಪುರುಷರ ಫ್ಲೋರ್ ವಿಭಾಗದ ಅಂತಿಮ ಸ್ಪರ್ಧೆಯಲ್ಲಿ ಉತ್ತರ ಪ್ರದೇಶದ ಹರ್ಷಿತ್ ಡಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಕೇರಳದ ಮಿನ್ಹಾಜ್ ಎಸ್ ಸಾಜ್ ಬೆಳ್ಳಿ ಹಾಗೂ ತುಲಿನ್ ತೆವಾರಿ ಕಂಚು ಪದಕ ಗೆದ್ದಿದ್ದಾರೆ.

<><*<><>*><>